**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಹೆಚ್. ಎಸ್. ಗೋಪಿನಾಥ್ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರಿಸುವ ಬಗ್ಗೆ.**

**ವಿಷಯ:**

ದಿನಾಂಕ:11-07-2023 ರಂದು ವಿಜಯವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಅಕ್ರಮ ವಾಹನ ನೋಂದಣಿ ವಿಷಯವಾಗಿ ಬೆಂಗಳೂರು ಪೂರ್ವ ತಾಲೂಕಿನ ಕಾಟಂನಲ್ಲೂರು ಬಳಿಯ ಎಸ್.ಎಸ್.ವಿ ಮೋಟಾರ್ಸ್ ಮಾಲೀಕ ವೇಣುಗೋಪಾಲ, ಮ್ಯಾನೇಜರ್ ಚಿರಂಜೀವಿ, ಸೂಪರ್‌ವೈಸರ್ ಶ್ರೀನಿವಾಸ್, ಕೋಲಾರ ಆರ್.ಟಿ.ಓ ಕಛೇರಿ ಏಜೆಂಟ್‌ಗಳಾದ ರಾಜು ಹಾಗೂ ನವೀನ್ ಗುಜರಿ ಹಾಗೂ ಕಳುವಾಗಿರುವ ಬಸ್ಸುಗಳ ಅಕ್ರಮ ನೋಂದಣಿ ಜಾಲದ ಕಿಂಗ್‌ಪಿನ್ ವೇಣೂಗೋಪಾಲ ಇವರುಗಳನ್ನು ಬೆಂಗಳೂರು ಗ್ರಾಮಾಂತರ ಪೊಲೀಸರು ಬಂಧಿಸಿರುತ್ತಾರೆ. ಈವರೆಗೆ ಐವರನ್ನು ಬಂಧಿಸಿದ್ದು ಈ ದಂಧೆಯಲ್ಲಿ ಇನ್ನೂ ಕೆಲವು ಆರ್.ಟಿ.ಓ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮಧ್ಯವರ್ತಿಗಳು ಭಾಗಿಯಾಗಿರುವುದಕ್ಕೆ ಪ್ರಾಥಮಿಕ ಸಾಕ್ಷ್ಯ ದೊರೆತಿರುತ್ತದೆ. ಎರಡೂವರೆ ವರ್ಷದಿಂದ ಈ ಅಕ್ರಮ ನೋಂದಣಿ ದಂಧೆ ನಡೆಸುತ್ತಿದ್ದ ಸಂಗತಿ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ನಾಗಾಲ್ಯಾಂಡ್ ಹಾಗೂ ಅರುಣಾಚಲಪ್ರದೇಶ ಆರ್.ಟಿ.ಓ ಕಛೇರಿಯಿಂದ ವಾಹನ ವರ್ಗಾವಣೆಗೆ ವಿತರಣೆಯಾಗಿರುವ ನಕಲಿ ನಿರಾಕ್ಷೇಪಣಾ ಪತ್ರಗಳನ್ನು (ಎನ್.ಓ.ಸಿ) ಆಧರಿಸಿ ಕೋಲಾರ ಆರ್.ಟಿ.ಓ ಕಛೇರಿಯಲ್ಲಿ ಬಸ್‌ಗಳನ್ನು ಅಕ್ರಮವಾಗಿ ನೋಂದಣಿ ಮಾಡಿಸಿ, ಶಾಲಾ-ಕಾಲೇಜುಗಳಿಗೆ ಅದೇ ಬಸ್‌ಗಳನ್ನು ಮಾರಾಟ ಮಾಡಲಾಗುತ್ತಿತ್ತು.

ಬೆಂಗಳೂರು ಹಾಗೂ ಕೋಲಾರ ಆರ್.ಟಿ.ಓ ಕಛೇರಿಯಲ್ಲಿ 250 ಕ್ಕೂ ಅಧಿಕ ಬಸ್‌ಗಳನ್ನು ನೋಂದಣಿ ಮಾಡಿಸಿ ಮಾರಾಟ ಮಾಡಿರುತ್ತಾರೆ. ನಗರದ ಕಾಟಂನಲ್ಲೂರು ಗ್ರಾಮದಲ್ಲಿ ವೇಣುಗೋಪಾಲ ಗ್ಯಾರೇಜ್ ಇಟ್ಟುಕೊಂಡಿದ್ದು, ಹಳೆಯ ಕಂಪನಿಯ ಬಸ್ charsies ಗಳನ್ನು ತಂದು, ಯಾವುದೇ ಅನುಮತಿ ಇಲ್ಲದೆ ಬಸ್‌ಗಳ ವಿನ್ಯಾಸ ಮಾಡಿಸಿ. ಅರುಣಾಚಲಪ್ರದೇಶದ ಆರ್.ಟಿ.ಓ ಕಛೇರಿಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ನಂತರ ಬೆಂಗಳೂರು ಹಾಗೂ ಕೋಲಾರ ಕಛೇರಿಗಳಲ್ಲಿ ಎನ್.ಓ.ಸಿ ಪಡೆಯುತ್ತಿದ್ದರು. ನಂತರ ಶಾಲಾ-ಕಾಲೇಜುಗಳ ಹೆಸರಿನಲ್ಲಿ ಕಡಿಮೆ ತೆರಿಗೆ ಪಾವತಿಸಿ ನೋಂದಣಿ ಮಾಡಿಸುತ್ತಿದ್ದರು. ಈ ಅಕ್ರಮ ದಂಧೆಯಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂ. ನಷ್ಟ ಉಂಟು ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿರುತ್ತದೆ. ಅದೇರೀತಿ ಗೂಡ್ಸ್ ವಾಹನ ನೋಂದಣಿಗಳನ್ನು ಕಳೆದ 6 ತಿಂಗಳಲ್ಲಿ 750 ಕ್ಕೂ ಹೆಚ್ಚು ವಾಹನಗಳನ್ನು ಅಕ್ರಮವಾಗಿ ನೋಂದಣಿಯಾಗಿರುವುದಕ್ಕೆ ದಾಖಲಾತಿಗಳಿವೆ. ಪರ್ಮಿಟ್ ಇಲ್ಲದಿದ್ದರೂ ಒಂದೇ ದಿನದಲ್ಲಿ ಕೋಲಾರ ಆರ್.ಟಿ.ಓ ದಿಂದ ರಾಜ್ಯ ಹಾಗೂ ಹೊರರಾಜ್ಯಗಳ ಆರ್.ಟಿ.ಓ ಗೆ ಸಿಸಿ ಕೊಡಲಾಗಿದೆ ಹಾಗೆಯೇ ಸ್ಥಳೀಯವಾಗಿ ಬಾಡಿಗೆ ಮನೆಯಲ್ಲಿ ವಾಸವಿರುವಂತೆ ನಕಲಿ ಕರಾರು ಪತ್ರ ಸೃಷ್ಟಿಸಿ, ಹೊರ ರಾಜ್ಯಗಳಿಂದ ವಾಹನ ವರ್ಗಾವಣೆ ಮಾಡಲಾಗಿದೆ. ಒಂದೇ ದಿನದಲ್ಲಿ ರೀ ನಂಬರ್ ಕೊಟ್ಟು, ಮಾರನೆ ದಿನವೇ ರಾಜ್ಯದ ಬೇರೆಬೇರೆ ಆರ್.ಟಿ.ಓ. ಗಳಿಗಲ್ಲದೆ ಹೊರ ರಾಜ್ಯಗಳಾದ ಮಣಿಪುರ, ಹರಿಯಾಣ, ಅರುಣಾಚಲಪ್ರದೇಶ ಇನ್ನಿತರ ರಾಜ್ಯಗಳಿಗೆ ಸಿಸಿ ಕೊಡಲಾಗಿದೆ. ಅಕ್ರಮ ನೋಂದಣಿಗೆ ಸಂಬಂಧಿಸಿದ ದಾಖಲಾತಿಗಳು ಆರ್.ಟಿ.ಓ ಕಛೇರಿಯಿಂದ ಕೆಲವು ಏಜೆಂಟ್‌ಗಳ ಮನೆಗಳಲ್ಲಿ ದಾಖಲೆಗಳು ಸಿಕ್ಕಿದೆ. ಇದೇ ಮಾದರಿಯಲ್ಲಿ ನಗರ ಪ್ರದೇಶಗಳಲ್ಲಿ ಕಾರು, ದ್ವಿಚಕ್ರ ವಾಹನಗಳನ್ನು ನಕಲಿ ದಾಖಲಾತಿ ಸೃಷ್ಟಿಸಿ ಮಾರಾಟ ಮಾಡುತ್ತಿರುವುದನ್ನು ಅನೇಕ ದಿನಪತ್ರಿಕೆಗಳಲ್ಲಿ ಓದಿರುತ್ತೇವೆ. ಈ ಹಿನ್ನೆಲೆಯಲ್ಲಿ ಸರ್ಕಾರವು ಕೂಡಲೆ ಈ ಅಕ್ರಮ ದಂಧೆಯ ಬಗ್ಗೆ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

...2/-

**ಉತ್ತರ:**

ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಅಕ್ರಮವಾಗಿ ವಾಹನ ನೋಂದಣಿ ಮಾಡುತ್ತಿರುವ ಕುರಿತು ಕೆಲವು ದೃಶ್ಯ ಮಾಧ್ಯಮಗಳಲ್ಲಿ ಹಾಗೂ ದಿನಪತ್ರಿಕೆಗಳಲ್ಲಿ ಪ್ರಸಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಬೆಂಗಳೂರು (ಪೂರ್ವ) ತಾಲ್ಲೂಕಿನ ಕಾಟಂನಲ್ಲೂರು ಬಳಿ ಎಸ್.ಎಸ್.ಪಿ. ಮೋಟಾರ್ಸ್ ಮಾಲೀಕರಾದ ಶ್ರೀ ವೇಣುಗೋಪಾಲ್ ಎಂಬುವವರು ಗುಜರಿ ಮತ್ತು ಕಳುವಾಗಿರುವ ಬಸ್ಸುಗಳ ಚಾಸಿಸ್‌ಗಳನ್ನು ತಂದು ಕವಚಗಳನ್ನು ಮಾರ್ಪಡಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ನಾಗಲ್ಯಾಂಡ್ ಮತ್ತು ಅರುಣಾಚಲ ಪ್ರದೇಶದಲ್ಲಿ ನೋಂದಾಯಿಸಿ ಅಲ್ಲಿಂದ ನಿರಾಕ್ಷೇಪಣಾ ಪತ್ರಗಳನ್ನು (NOC) ಪಡೆದು ಕೋಲಾರ ಮತ್ತು ಬೆಂಗಳೂರಿನ ಕೆಲವು ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಶಾಲಾ ವಾಹನಗಳಾಗಿ ನೋಂದಾಯಿಸಿರುವ ಬಗ್ಗೆ ಮೇಲ್ನೋಟಕ್ಕೆ ಕಂಡುಬಂದಿದೆ. ಇಂತಹ ಪ್ರಕರಣಗಳು ಸುಮಾರು ಎರಡುವರೆ ವರ್ಷಗಳಿಂದ ನಡೆದಿರುವುದಾಗಿ ತಿಳಿದುಬಂದಿದೆ. ಈ ಅಕ್ರಮ ದಂಧೆಯಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದರ ಬಗ್ಗೆ ತನಿಖೆಯಿಂದ ತಿಳಿದುಬರಲಿದೆ.

ಅದೇ ರೀತಿ ನೀಡಿರುವ ಪ್ರಸ್ತಾವನೆಯಲ್ಲಿ 750 ಕ್ಕೂ ಹೆಚ್ಚು ಗೂಡ್ಸ್ ವಾಹನಗಳ ಅಕ್ರಮ ನೋಂದಣಿ ಬಗ್ಗೆ ಕೋಲಾರ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ಬೇರೆ ಬೇರೆ ರಾಜ್ಯಗಳಿಗೆ ನಿರಾಕ್ಷೇಪಣಾ ಪತ್ರ ಹಾಗೂ ಮರುನೋಂದಾಯಿಸಿ ಮಣಿಪುರ, ಹರಿಯಾಣ, ಅರುಣಾಚಲ ಪ್ರದೇಶ ಮತ್ತು ಇನ್ನಿತರೆ ರಾಜ್ಯಗಳ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ ನಿರಾಕ್ಷೇಪಣಾ ಪತ್ರ ನೀಡಲಾಗಿದೆಯೇ ಎಂಬುದರ ಬಗ್ಗೆ ತನಿಖೆಯನ್ನು ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸದರಿ ವಿಷಯದ ಕುರಿತು ವಿಜಯ ಟೈಮ್ಸ್ ಪತ್ರಿಕೆಯ ವರದಿಗಾರರು ಭೇಟಿ ಮಾಡಿ ತಿಳಿಸಿದ್ದು, ತಕ್ಷಣ ಈ ಪ್ರಕರಣದಲ್ಲಿ ತನಿಖೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಮತ್ತು ಜಂಟಿ ಪೊಲೀಸ್ ಆಯುಕ್ತರು (ಅಪರಾಧ) ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಆವಲಹಳ್ಳಿ ಪೊಲೀಸ್ ಠಾಣೆ, ಹೊಸಕೋಟೆ ಉಪ ವಿಭಾಗ ಇಲ್ಲಿ ಅಪರಾಧ ಸಂಖ್ಯೆ: 0242/2023, ದಿನಾಂಕ: 30-06-2023 ರಂತೆ ಪ್ರಕರಣ ದಾಖಲಿಸಿಕೊಂಡು ಈಗಾಗಲೇ 3 ಜನರ ಮೇಲೆ F.I.R ದಾಖಲಿಸಲಾಗಿದೆ. ಈವರೆಗೆ ಈ ಪ್ರಕರಣದಲ್ಲಿ 6 ಜನರನ್ನು ಬಂಧಿಸಲಾಗಿದೆ. ಈ ಪ್ರಕರಣದ ಪ್ರಮುಖ ಆರೋಪಿಯಾದ ಶ್ರೀ ವೇಣುಗೋಪಾಲರೆಡ್ಡಿ ಅವರನ್ನೂ ಸಹ ಬಂಧಿಸಲಾಗಿದೆ. ತನಿಖೆ ಮುಂದುವರೆದಿದ್ದು, ಇದೊಂದು ಬೃಹತ್ ಜಾಲವೆಂದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕೂಡಲೇ ದಂಧೆಯನ್ನು ಭೇಧಿಸಿ ತಪ್ಪಿತಸ್ಥರ ಮೇಲೆ ಮತ್ತು ಯಾವುದೇ ಅಧಿಕಾರಿ/ನೌಕರರು ಶಾಮೀಲಾಗಿದ್ದಲ್ಲಿ ಇವರ ವಿರುದ್ಧವೂ ಸಹ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಈ ಕುರಿತಂತೆ ಕೋಲಾರ ಹಾಗೂ ಕೆ.ಜಿ.ಎಫ್. ಸಾರಿಗೆ ಕಛೇರಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ನೋಂದಣಿ ಕುರಿತಾಗಿ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ಅವಶ್ಯ ದಾಖಲೆಗಳೊಂದಿಗೆ ನಿಖರವಾದ ವರದಿಯನ್ನು ಸಲ್ಲಿಸುವಂತೆ ತಿಳಿಸಿ ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ಗ್ರಾಮಾಂತರ) ವಿಭಾಗ ಇವರ ನೇತೃತ್ವದಲ್ಲಿ ಮೂವರು ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ.

ಅದೇ ರೀತಿ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿನ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಪರಿಶೀಲಿಸಿ ನಿಖರವಾದ ವರದಿಯನ್ನು ಅವಶ್ಯ ದಾಖಲೆಗಳೊಂದಿಗೆ ಸಲ್ಲಿಸುವ ಸಲುವಾಗಿ ಜಂಟಿ ಸಾರಿಗೆ ಆಯುಕ್ತರು, ಬೆಂಗಳೂರು (ನಗರ) ವಿಭಾಗ ಇವರ ನೇತೃತ್ವದಲ್ಲಿ ಮೂವರು ಅಧಿಕಾರಿಗಳ ತಂಡವನ್ನು ರಚಿಸಲಾಗಿದೆ.

ಸದರಿ ತಂಡಗಳಿಂದ ವರದಿಗಳು ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ, ವಾಹನಗಳು ಅಕ್ರಮವಾಗಿ ನೋಂದಣಿಯಾಗಿರುವುದು ಕಂಡುಬಂದಲ್ಲಿ ತಪ್ಪಿತಸ್ಥ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಟಿಡಿ 50 ಟಿಡಿಕ್ಯೂ 2023

(ಸಹಿ)

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು.